**<u>ಸಾಕ್ಷಿಯನ್ನು ದಿಃ 20.02.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ವಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎನ್.ಎಂ.ಪಿ. ವಕೀಲರಿಂದಃ</u>**

ಸದರಿ ಅರ್ಜಿದಾರರು ಮೊದಲು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ನಮ್ಮ ಆಸ್ಪತ್ರೆಗೆ ಗಾಯಾಳು ಬಂದರೆ ಸದರಿಯವರ ಹಿನ್ನೆಲೆ ಮತ್ತು ಸದರಿಯವರು ಯಾವ ಆಸ್ಪತ್ರೆಯಿಂದ ಚಿಕಿತ್ಸೆಗೆ ಬಂದಿರುತ್ತಾರೆ ಮತ್ತು ಇತರೆ ಮಾಹಿತಿಯನ್ನು ಕೇಸ್ ಶೀಟ್ ನಲ್ಲಿ ನಮೂದಿಸಿರುತ್ತೇವೆ. ಈ ಕೇಸಿನಲ್ಲಿ ಸಾಕ್ಷಿಯೂ ಕೇಸ್ ಶೀಟ್ ಅನ್ನು ನೋಡುತಿದ್ದು ಅದರ ಪ್ರಕಾರ ಸದರಿ ಗಾಯಾಳು ಅರ್ಜಿದಾರರು ಜಿಗಣಿಯ ACE ಆಸ್ಪತ್ರೆಯಿಂದ ನಮ್ಮ ಆಸ್ಪತ್ರೆಗೆ ಬಂದಿರುವುದಾಗಿ ನಮೂದು ಇರುತ್ತದೆ ಎನ್ನುವರು. ಸದರಿ ಆಸ್ಪತ್ರೆಯ ವೈದ್ಯರು ನಮ್ಮ ಆಸ್ಪತ್ರೆಗೆ ಕಳಹಿಸಿರುವ referral letter ಬಗ್ಗೆ ಮಾಹಿತಿ ಇಲ್ಲ. ನಮ್ಮ ಆಸ್ಪತ್ರೆಯ MLC Register ಮತ್ತು police intimation ಅನ್ನು ಹಾಜರುಪಡಿಸಿರುತ್ತೇನೆ. ಸದರಿ ಅರ್ಜಿದಾರರಿಗೆ ಯಾವ ಚಿಕಿತ್ಸೆಯನ್ನು ನೀಡಿರುತ್ತಾರೆ ಎಂದು ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ. ಸದರಿ ಕೇಸ್ ಶೀಟ್ ನಲ್ಲಿ ಮತ್ತು MLC Register ನಲ್ಲಿ ಯಾವುದೇ ವಾಹನಗಳು ಸಂಖ್ಯೆ ನಮೂದಾಗಿರುವುದಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಸಹಾಯ ಮಾಡುವ ಸಲುವಾಗಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು:</u>** *1* ನೇ ಎದುರುದಾರರ ಪರ ವಕೀಲರು ಗೈರುಹಾಜರಿದ್ದರಿಂದ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆ: ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲ್ಪಟ್ಟಿದೆ)

(ಓ.ಹೆ.ಕೆ.ಸ.ಇ.)

IX ಹಿರಿಯ ಹೆಚ್ಚುವರಿ ನ್ಯಾಯಾಧೀಶರು,
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು